**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 4**
**ಚಾ.ಸಾ.ಸಂಖ್ಯೆಃ 1**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ಗೌಡಪ್ಪ ಸೊಕನಾದಗಿ |
| ತಂದೆಯ ಹೆಸರುಃ | ವೆಂಕಪ್ಪ |
| ವಯಸ್ಸುಃ | **45** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ದಾದನಟ್ಟಿ |

**ಸಾಕ್ಷಿಯನ್ನು ದಿಃ 25.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

**1.** ಚಾಸಾ-**10** ಹಾಗೂ **11** ನನ್ನ ಮಕ್ಕಳು. ನನಗೆ ಆರೋಪಿತರ ಪರಿಚಯವಿದೆ. ಚಾಸಾ-**12** ರಿಂದ **15** ರವರ ಪರಿಚಯವಿದೆ. ಚಾಸಾ-**10** ಮೋಟಾರ್ ಸೈಕಲ ಮೇಲಿಂದ ಬಿದ್ದಿದ್ದರಿಂದ ಗಾಯಗೊಂಡಿದ್ದರು. ಆರೋಪಿತರು ನಮ್ಮ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿಲ್ಲ, ಹಲ್ಲೆ ಮಾಡಿಲ್ಲ. ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಚಾಸಾ-**10** ಇವರಿಗೆ ಗಾಯಪಡಿಸಿಲ್ಲ. ನಾನು ಸಂಶಯದ ಮೇಲೆ ಪೊಲೀಸರಿಗೆ ಹೇಳಿದ್ದೆ. ಅವರು ಈಗ ನಾನು ನೋಡುತ್ತಿರುವ ದೂರಿನ ಮೇಲೆ ಸಹಿ ಪಡೆದಿರುತ್ತಾರೆ. ( ಸದರಿ ದೂರನ್ನು ನಿಪಿ-**10** ಅಂತ ಸಾಕ್ಷಿದಾರರ ಸಹಿಯನ್ನು ನಿಪಿ-**10(**ಎ**)** ಅಂತ ಗುರುತಿಸಲಾಯಿತು).

**2.** ನಾನು ಪೊಲೀಸರಿಗೆ ಈಗ ನೋಡುತ್ತಿರುವ ಘಟನಾ ಸ್ಥಳ ಪಂಚನಾಮೆ ಮಾಡಲು ಜಾಗ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. (ಸದರಿ ಪಂಚನಾಮೆಯನ್ನು ನಿಪಿ-**11** ಅಂತ, ಸಾಕ್ಷಿದಾರರ ಸಹಿಯನ್ನು ನಿಪಿ-**11(**ಎ**)** ಅಂತ ಗುರುತಿಸಲಾಯಿತು). ಈಗ ನೋಡುತ್ತಿರುವ ನಕ್ಷೆಯಲ್ಲಿ ನನ್ನ ಸಹಿ ಇದೆ ಎಂದರೆ ಸರಿ. (ಸದರಿ ನಕ್ಷೆಯನ್ನು ನಿಪಿ-**12** ಅಂತ ಸಾಕ್ಷಿದಾರರ ಸಹಿಯನ್ನು ನಿಪಿ-**12(**ಎ**)** ಅಂತ ಗುರುತಿಸಲಾಯಿತು). ಈಗ ನಾನು ನೋಡುತ್ತಿರುವ ಫೋಟೊದಲ್ಲಿ ನಾನು ಕಂಡು ಬರುತ್ತೇನೆ ಎಂದರೆ ಸರಿ. (ಸದರಿ ಫೋಟೊವನ್ನು ನಿಪಿ-**13** ಅಂತ ಗುರುತಿಸಲಾಯಿತು). ಈಗ ನೋಡುತ್ತಿರುವ ಪಂಚನಾಮೆಗೆ ನನ್ನ ಸಹಿ ಇದೆ ಎಂದರೆ ಸರಿ. (ಅದನ್ನು ನಿಪಿ-**14** ಅಂತ, ಸಾಕ್ಷಿದಾರರ

**ಎಸ್.ಸಿ.ಸಂಖ್ಯೆಃ 10022/2025**
**ಪ್ರಾ.ಸಾ.ಸಂಖ್ಯೆಃ 4**
**ಚಾ.ಸಾ.ಸಂಖ್ಯೆಃ 1**

ಸಹಿಯನ್ನು ನಿಪಿ-**14**(ಎ) ಅಂತ ಗುರುತಿಸಲಾಯಿತು). ಅವುಗಳಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ಪೋಟೊದಲ್ಲಿ ನಾನು ಕಂಡು ಬರುತ್ತೇನೆ ಎಂದರೆ ಸರಿ. (ಸದರಿ ಪೋಟೊವನ್ನು ನಿಪಿ-**15** ಅಂತ ಗುರುತಿಸಲಾಯಿತು). ಸದರಿ ಪೋಟೊವನ್ನು ಯಾವ ಕಾರಣಕ್ಕಾಗಿ ತೆಗೆಯಲಾಗಿದೆ ನನಗೆ ಗೊತ್ತಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**<u>ಪಾಟಿಸವಾಲು: ಸರ್ಕಾರಿ ಅಭಿಯೋಜಕರಿಂದಃ-</u>**

**1.** ದಿ: **25.01.2023** ರಂದು ಆಗಿನ ಮಂತ್ರಿ ಗೋವಿಂದ ಕಾರಜೋಳ ಇವರ ಹುಟ್ಟುಹಬ್ಬದ ನಿಮಿತ್ಯ ನನ್ನ ಮಗ ಚಾಸಾ-**10** ಶುಭಾಶಯದ ಬ್ಯಾನರ ಹಾಕಿಸಿದ್ದ, ಅದನ್ನು ಆರೋಪಿತರು ತಮ್ಮ ಪೋಟೊಗಳನ್ನು ಬ್ಯಾನರನಲ್ಲಿ ಹಾಕಿಲ್ಲ ಅಂತ ಜಗಳ ತೆಗೆದು ಬ್ಯಾನರ ಕಿತ್ತು ಒಗೆದಿದ್ದರು ಎಂದರೆ ಸರಿಯಲ್ಲ. ದಿ: **30.01.2023** ರಂದು ರಾತ್ರಿ **9-30** ಗಂಟೆಗೆ ಚಾಸಾ-**10** ನನ್ನ ಮಗ ಹಾಗೂ ಚಾಸಾ-**12** ಕಿರಣ ಮಲ್ಲಾಪೂರದ ನಮ್ಮ ಜಮೀನ ಸರ್ವೆ ನಂ. **13** ರಲ್ಲಿ ಟ್ರ್ಯಾಕ್ಟರನಿಂದ ಗಳೆ ಹೊಡೆಯಲು ಹೋಗಿದ್ದರು, ಅವರಿಬ್ಬರೆ ಹೋಗಿದ್ದರು ಅಂತ ನಾನು ಹಾಗೂ ಚಾಸಾ-**11** ಕೂಡ ಅಲ್ಲಿಗೆ ಹೋಗಿದ್ದೆವು, ಆಗ ರಾತ್ರಿ **11-00** ಗಂಟೆ ಸಮಯದಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಕೂಡಿಕೊಂಡು ಕೈಯಲ್ಲಿ ಕೊಯ್ತಾ, ಬಡಿಗೆ, ಕಲ್ಲು, ಕಬ್ಬಿಣದ ರಾಡಗಳನ್ನು ಹಿಡಿದುಕೊಂಡು ಬಂದು ಚಾಸಾ-**10** ಇವರಿಗೆ ಬೊಸಡಿ ಮಗನೆ ಅಂತ ಬೈದರು, ನಂತರ ಕೊಲೆ ಮಾಡುವ ಉದ್ದೇಶದಿಂದ ಆರೋಪಿ ನಂ. **1** ತನ್ನ ಕೈಯಲ್ಲಿದ್ದ ಕೊಯ್ತಾದಿಂದ, **2** ನೇ ಆರೋಪಿ ರಾಡನಿಂದ, **3** ನೇ ಆರೋಪಿ ಬಡಿಗೆಯಿಂದ, **4** ನೇ ಆರೋಪಿ ಕಲ್ಲಿನಿಂದ, ಚಾಸಾ-**10** ಇವನಿಗೆ ಹೊಡೆದು ಗಾಯ ಪಡಿಸಿದರು ಎಂದರೆ ಸರಿಯಲ್ಲ. ಅದರಿಂದಾಗಿ ಅವನಿಗೆ ಎಡಗೈ ಬೆರಳುಗಳು ಮುರಿದವು, ತಲೆಗೆ ರಕ್ತ ಗಾಯ ಆಗಿತ್ತು ಎಂದರೆ ಸರಿಯಲ್ಲ.

**2.** ಆಗ ನಾನು, ಚಾಸಾ-**11**, ಚಾಸಾ-**13** ಮತ್ತು **14** ರವರು ಸೇರಿ ಜಗಳ ಬಿಡಿಸಿಕೊಂಡೆವು ಎಂದರೆ ಸರಿಯಲ್ಲ. ನಂತರ ಅವನನ್ನು ಉಪಚಾರಕ್ಕಾಗಿ

ಲೋಕಾಪೂರದ ಸಾಯಿ ಆಸ್ಪತ್ರೆಗೆ ದಾಖಲು ಮಾಡಿದೆವು, ನಂತರ ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಸೇರಿಸಿದೆವು ಎಂದರೆ ಸರಿಯಲ್ಲ. ನಾನು ನಿಪಿ-10 ರಂತೆ ಪಿರ್ಯಾದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**3.** ಅದೇ ದಿನ ಮಧ್ಯಾಹ್ನ 3-30 ರಿಂದ 4-30 ಗಂಟೆಯವರೆಗೆ ಲೋಕಾಪೂರ ಪೊಲೀಸ್ ಠಾಣೆಗೆ ಹಾಜರಾಗಿ ಘಟನೆ ಸಮಯದಲ್ಲಿ ಚಾಸಾ-10 ಧರಿಸಿದ್ದ ರಕ್ತ ಹತ್ತಿದ ಬೂದು ಬಣ್ಣದ ಜೀನ್ಸ ಪ್ಯಾಂಟ, ಆಕಾಶ ನೀಲಿ ಬಣ್ಣದ ಅಂಗಿ, ಒಂದು ಬನಿಯನ್ ನ್ನು ಹಾಜರುಪಡಿಸಿದೆ, ಅವುಗಳನ್ನು ಪಂಚರ ಸಮಕ್ಷಮ ಪೊಲೀಸರು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. (ಅವುಗಳನ್ನು ಗುರುತಿಗೋಸ್ಕರ ಕ್ರಮವಾಗಿ ಮುಮಾ-7 ರಿಂದ 9 ಅಂತ ಗುರುತಿಸಲಾಯಿತು).

**4.** ಈಗ ನೋಡುತ್ತಿರುವ ಮುಮಾ-1 ರಿಂದ 6 ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳು ಎಂದರೆ ಸರಿಯಲ್ಲ. ಘಟನೆಯನ್ನು ಪ್ರತ್ಯಕ್ಷ್ಯ ನೋಡಿ ನಿಪಿ-10 ರಂತೆ ದೂರು ನೀಡಿ, ಪಂಚನಾಮೆ ಮಾಡಲು ಜಾಗೆ ತೋರಿಸಿ, ನಿಪಿ-11 ಹಾಗೂ 12 ಇವುಗಳಿಗೆ ಸಹಿ ಮಾಡಿ, ನಿಪಿ-13 ರಂತೆ ಪೋಟೊ ತೆಗೆದು, ನಿಪಿ-14 ರಂತೆ ಪಂಚನಾಮೆ ಮಾಡಿ, ನಿಪಿ-15 ರಂತೆ ಪೋಟೊ ತೆಗೆದಿದ್ದರೂ ಸಹ ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಚಾಸಾ-10 ಇವರು ಮೋಟಾರ್ ಸೈಕಲನಿಂದ ಬಿದ್ದು ಗಾಯ ಹೊಂದಿದ್ದಾರೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.**

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**